
# ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಶ್ರೀ ಕುವೆಂಪು ಅವರ ಕೊಡುಗೆ

ಡಾ. ಕೆ. ಚಿದಾನಂದ ಗೌಡ

ಕನ್ನಡ ಜನತೆಗೆ ರಾಮಕೃಷ್ಣ, ವಿವೇಕಾನಂದರ ವಿಚಾರಗಳನ್ನು ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರು ಶ್ರೀ ಕುವೆಂಪು ಅವರು. ಅವರು ಮೈಸೂರು ರಾಮಕೃಷ್ಣ ಆಶ್ರಮದೊಂದಿಗೆ ಹೊಂದಿದ್ದ ಸಂಪರ್ಕ, ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೊಂದಿಗೆ ಅವರಿಗೆ ಇದ್ದ ಒಡನಾಟ, ಅವರ ಜೀವನದಲ್ಲಿ ದಿವ್ಯತ್ರಯರ ಪ್ರಭಾವ ಮುಂತಾದ ವಿಚಾರಗಳನ್ನು ಇಲ್ಲಿ ವಿವರಿಸಿರುವ ಲೇಖಕರು ಕನ್ನಡದ ಹೆಸರಾಂತ ಬರಹಗಾರರು. ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಅವರು ಮೈಸೂರು ನಿವಾಸಿಗಳು.

೧೯೨೦ರಲ್ಲಿ ತನ್ನ ೧೬ನೇ ವಯಸ್ಸಿನಲ್ಲಿ ಶಾಲಾವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಹೋದ ಕೆ.ವಿ.ಪುಟ್ಟಪ್ಪ (ಮುಂದೆ ಕುವೆಂಪು) ಮೊದಲ ಬಾರಿ ಸಯ್ಯಾಜಿ ರಾವ್ ರಸ್ತೆಯಲ್ಲಿದ್ದ ಸಾರ್ವಜನಿಕ ಪುಸ್ತಕಾಲಯಕ್ಕೆ ಹೋದದ್ದು **'ಡೇನಿಯಲ್ ಡೆಫೊ'** ಬರೆದ **'ರಾಬಿನ್ಸನ್ ಕ್ರೂಸೋ'** ಪುಸ್ತಕವನ್ನು ಓದಲೆಂದು! ಆ ಬಳಿಕ ಎತ್ತರದ ಬೀರುಗಳಲ್ಲಿ ಅಂತರ ಅಂತರವಾಗಿ ಸಾಲುಗೊಂಡಿರುತ್ತಿದ್ದ ಇತರ ಪುಸ್ತಕಗಳನ್ನು ಅವಲೋಕನ ಮಾಡುತ್ತಿದ್ದರು. ಬೀರುಗಳಲ್ಲಿ ತುಂಬಾ ಎತ್ತರದ ಅರಗಳಲ್ಲಿದ್ದ ಪುಸ್ತಕಗಳನ್ನು ಒಂದು ಚಕ್ರಕಾಲಿನ ಏಣಿಯ ಮೂಲಕ ಮೇಲೆ ಹತ್ತಿ ನೋಡಬಹುದಿತ್ತು. ಹೀಗೆ ನೋಡಿದ ಒಂದು ದಿನದ ಅನುಭವದ ಕುರಿತು ತಮ್ಮ **'ನೆನಪಿನ ದೋಣಿಯಲ್ಲಿ'** ಆತ್ಮಕಥನದ ಪುಸ್ತಕದಲ್ಲಿ ಕುವೆಂಪು ಹೀಗೆ ಬರೆಯುತ್ತಾರೆ: ''**ಹೀಗೆ ನೋಡುತ್ತಿರುವಾಗಲೆ ನನಗೆ ನನ್ನ ಜೀವನದ ದಿಕ್ಕನ್ನೆ ತಿರಗಿಸಿ, ನನ್ನ ಬದುಕನ್ನೆಲ್ಲ ಮರ್ತ್ಯದಿಂದ ಅಮರ್ತ್ಯಕ್ಕೆತ್ತಿ ಬೀಸಿದ ಭಗವತ್ ಕೃಪಾಹಸ್ತರೂಪದ ಶ್ರೀರಾಮಕೃಷ್ಣ-ವಿವೇಕಾನಂದ ವಿಷಯಕವಾದ ಕೃತಿಶ್ರೇಣಿಯ ದರ್ಶನವಾದದ್ದು!**'' ಮುಂದೊಂದು ದಿನ ಪುಸ್ತಕದ ಅಂಗಡಿಯೊಂದರಿಂದ ರವೀಂದ್ರನಾಥ ಠಾಕೂರ್‌ರವರ 'ಗೀತಾಂಜಲಿ' ಪುಸ್ತಕವನ್ನು ಕೊಂಡುಕೊಳ್ಳುತ್ತಾರೆ. ಅದರ ಕುರಿತು ಅವರು ಹೀಗೆ ಬರೆಯುತ್ತಾರೆ: ''**ಪುಸ್ತಕ ಕೊಂಡು ರೂಮಿಗೆ ಬಂದೆ. ಓದಿದೆ, ಮತ್ತೆ ಓದಿದೆ... ಎಷ್ಟು ದಿನ ಅದರ ಮಾದಕತೆಯಲ್ಲಿ ಕಳೆದುವೊ?... ಚೇತನವೆಲ್ಲ ಗೀತಾಂಜಲಿಯ ನಂದನದಲ್ಲಿ ನರ್ತಿಸಿ ನಲಿವ ಅಪ್ಸರೆಯಾಗಿತ್ತು. ಆ ಇಂಗ್ಲಿಷ್ ವಚನ ಕವನಗಳಲ್ಲಿ ಸ್ಫುರಿಸುತ್ತಿದ್ದ ಕವಿಹೃದಯದ ಪ್ರಾರ್ಥನೆ, ಅಭೀಪ್ಸೆ, ಆರಾಧನೆ, ಅನಂತತಾ ಆಕಾಂಕ್ಷೆ , ಸುಮಧುರಾಸ್ಪಷ್ಟ ಸ್ವಾಪ್ನಿಕಾಹ್ವಾನ ಇವು ನನ್ನ ಆತ್ಮವನ್ನು ತಮ್ಮ ಇಂದ್ರಚಾಪಸದೃಶವಾದ ವರ್ಣೋಪವರ್ಣಮಯ ಭಾವಪಾಶಗಳಿಂದ ನೆಯ್ದ ಇಂದ್ರಜಾಲದಿಂದ ಬಂಧಿಸಿ, ಸುದೂರದೊಂದು ಇಂದ್ರಲೋಕಕ್ಕೊಯ್ದುವು. ಶ್ರೀರಾಮಕೃಷ್ಣ-ವಿವೇಕಾನಂದ ಸಾಹಿತ್ಯದಿಂದ ನನಗೆ ಆಗಲೆ ಗೋಚರವಾಗತೊಡಗಿದ್ದ ಆಧ್ಯಾತ್ಮಿಕ ಸತ್ಯಕ್ಕೆ ಒಂದು ಕಾವ್ಯ ಸೌಂದರ್ಯದ ದರ್ಶನದೀಪ್ತಿ ಸಂಗಮಿಸಿದಂತಾಯ್ತು!**''



ಮುಂದೆ ೧೯೨೪ರ ಜನವರಿ ೨೩ರಂದು ಬೆಂಗಳೂರಿನಲ್ಲಿ ಭೂಪಾಳಂ ಚಂದ್ರಶೇಖರಯ್ಯನವರ ಕೊಠಡಿಯಲ್ಲಿ ತಂಗಿದ್ದಾಗ ನಡೆದುದನ್ನು ಕುವೆಂಪು ಹೀಗೆ ಬರೆಯುತ್ತಾರೆ: **ಅವರ ಮೇಜಿನ ಮೇಲೆ ನನ್ನ ಜೀವನನೌಕೆಯ ಕರ್ಣಧಾರ ಸ್ವರೂಪವಾಗಲಿದ್ದ ಒಂದು ಮಹಾ ಪೂಜ್ಯ ಅನರ್ಘ್ಯ ವಸ್ತುವನ್ನು ಸಂದರ್ಶಿಸಿದೆ: 'Life of Sri Ramakrishna by Swami Madhavananda' ೭೬೩ ಪುಟಗಳ ಬೃಹತ್ ಗಾತ್ರದ ಹೆಬ್ಬೊತ್ತಗೆ! ನನ್ನ ಪ್ರಜ್ಞೆಗೆ ಅರಿಯದಂತೆಯೆ ದೇವದೇವ ಮಹದೇವನ ಪುಸ್ತಕರೂಪಿ ಕೃಪಾಹಸ್ತ ತನ್ನ ಕಂದನನ್ನೆತ್ತಿ ಎದೆಗಪ್ಪಿಕೊಳ್ಳಲು ಕೈಚಾಚಿದಂತಿತ್ತು! ಶ್ರೀ ತಾಯಿಯ ಕರುಣೆ ಮೈದಾಳಿದಂತಿತ್ತು!**'' ಅದನ್ನು ಅವರು ಮಧ್ಯರಾತ್ರಿ ೩ ಗಂಟೆಯವರೆಗೂ ಓದುತ್ತಾಹೋದರು. ಆ ಪುಸ್ತಕ ಅವರಿಗೆ ಕಾಣಿಕೆ ಕೊಡಲು ತಂದದ್ದಾಗಿತ್ತು ಎಂದು ತಿಳಿದ ಬಳಿಕ ಸಮಾಧಾನದಿಂದ ನಿದ್ರೆಮಾಡಿದರು.

ಮೈಸೂರಿನಲ್ಲಿ ಶ್ರೀರಾಮಕೃಷ್ಣಾಶ್ರಮ ಇದೆಯೆಂಬುದರ ಅರಿವು ತನಗೆ ತಡವಾಗಿ ತಿಳಿದುದರ ಕುರಿತಾಗಿಯೂ ಕುವೆಂಪು

‘ನೆನಪಿನ ದೋಣಿ’ಯಲ್ಲಿ ಹೀಗೆ ವ್ಯಕ್ತಪಡಿಸುತ್ತಾರೆ: ‘‘೧೯೨೬ನೆಯ ಜನವರಿ ೧೫ ನನ್ನ ಬದುಕಿನಲ್ಲಿ ಚಿರಸ್ಮರಣೀಯವಾಗಿರಬೇಕಾದ ದಿವ್ಯ ದಿನ. ತನ್ನರಿವಿಲ್ಲದೆಯೆ ನನ್ನ ಚೇತನ ತನ್ನುದ್ಧಾರದ ಊರ್ಧ್ವ ಮುಖ ಪ್ರವಾಸತೀರ್ಥಕ್ಕೆ ಧುಮುಕಿ ಮಂಗಲಸ್ನಾನಮಾಡಿದ ಸುಮುಹೂರ್ತದ ರಕ್ಷಾದಿನವದು!’’ ಆ ದಿನ ಅವರು ಶ್ರೀರಾಮಕೃಷ್ಣಾಶ್ರಮದ ಸ್ವಾಮಿ ಸಿದ್ಧೇಶ್ವರಾನಂದರವರನ್ನು ಪರಿಚಯಿಸಿಕೊಂಡ ದಿನವಾಗಿತ್ತು. ಮುಂದೆ ೨೨ ದಿನಗಳ ಬಳಿಕ ಸ್ನೇಹಿತರ ಒತ್ತಾಯಕ್ಕೋ ಎಂಬಂತೆ ಶ್ರೀರಾಮಕೃಷ್ಣ ಆಶ್ರಮಕ್ಕೆ ಸಿದ್ಧೇಶ್ವರಾನಂದರವರನ್ನು ಭೇಟಿಯಾಗಲು ಹೋದಾಗ ನಡೆದುದನ್ನು ಕುವೆಂಪು ಹೀಗೆ ವಿವರಿಸುತ್ತಾರೆ: ‘‘O Puttappa, come! Come!’ ಎನ್ನುತ್ತಾ ಸ್ವಾಮೀಜಿ ನಗುಮೊಗದವರಾಗಿ ಇರ್ಕಯ್ಯಿಂದಲೂ ಬಾಚಿ ಬಳಿಯ ಬೆಂಚಿನ ಮೇಲೆ ಕುಳ್ಳಿರಿಸಿ ತಾವೂ ಪಕ್ಕದಲ್ಲಿ ಕುಳಿತರು. ನನಗೆ ಅತಿ ಹತ್ತಿರ ಕುಳಿತು ಸಂವಾದಿಸುತ್ತಿದ್ದ ಅವರ ಮಾತೃ ಪ್ರೇಮ ಸ್ವರೂಪದ ಭ್ರಾತೃಸ್ನೇಹದ ಅಹೈತುಕವಾದ ದೈವೀ ವಿಶ್ವಾಸದ ಆನಂದಮಯ ಆವರ್ತಗರ್ತಕ್ಕೆ ಸಿಕ್ಕಿಬಿಟ್ಟಿತ್ತು ನನ್ನ ಚೈತನ್ಯನೌಕೆ!... ಬುದ್ಧಿಗಲ್ಲದಿದ್ದರೂ ನನ್ನ ಜೀವಾತ್ಮಕ್ಕೆ ಪರಕೀಯವಾದಂತಿದ್ದ ಈ ಲೋಕದಲ್ಲಿ ಸ್ವಕೀಯರೊಬ್ಬರು ಸಿಕ್ಕಿದಂತಾಗಿ, ಏನೋ ಅನಿರ್ದೇಶ್ಯ ಧೈರ್ಯವೊಂದು ನನ್ನನ್ನು ಆತುಗೊಂಡಿತ್ತು. ದಿಕ್ಕಿಲ್ಲದ ಚೇತನಕ್ಕೆ ದಿಕ್ಕಾಗಿ ಶ್ರೀರಾಮಕೃಷ್ಣ ಜನ್ಮೋತ್ಸವದ ಸಾಮಾರಂಭಕ್ಕೆ ಹೋಗಿದ್ದೆ. ಪ್ರಾರಂಭದಲ್ಲಿ ನಾನು ‘ಎಲ್ಲಿಹೆ?’ ‘ಎಂತಿಹೆ?’ ಎಂಬ ನನ್ನ ಎರಡು ಕವನಗಳನ್ನು ರಾಗವಾಗಿ ವಾಚಿಸಿದೆ. ಅಲ್ಲದೆ ‘ಶ್ರೀರಾಮಕೃಷ್ಣ ಪರಮಹಂಸ’ ಎಂಬ ಹೊಸದಾಗಿ ರಚಿಸಿದ್ದ ಕವನವನ್ನೂ ಹಾಡಿದೆ. ಅಂದು ಹಾಡಿದ ‘ಎಲ್ಲಿಹೆ?’ ‘ಎಂತಿಹೆ?’ ಎಂಬ ಕವನಗಳು ೧೯೩೦ರಲ್ಲಿ ‘ಕೊಳಲು’ ಕವನಸಂಗ್ರಹದಲ್ಲಿ ಅಚ್ಚಾಗಿವೆ. ‘ಶ್ರೀರಾಮಕೃಷ್ಣ ಪರಮಹಂಸ’ ಕವನವು ‘ಅಗ್ನಿಹಂಸ’ ಕವನಸಂಗ್ರಹದಲ್ಲಿ ಅಚ್ಚಾಗಿ ಸುಪ್ರಸಿದ್ಧವೆ ಆಗಿದೆ.’’

ಮುಂದೆ ೧೯೨೬ನೇ ಫೆಬ್ರವರಿ ೧೭ನೇ ದಿನಾಂಕದಂದು ಸ್ವಾಮೀಜಿ ತನ್ನ ಕೊಠಡಿಗೆ ಬಂದುದರ ವಿವರವನ್ನು ಕುವೆಂಪು ಹೀಗೆ ಕೊಡುತ್ತಾರೆ: ‘‘ಸಿದ್ಧೇಶ್ವರಾನಂದರು ನನ್ನ ದೀನ ನಿವಾಸಕ್ಕೆ ಆಗಮಿಸಿ ಅದನ್ನು ಪವಿತ್ರಗೊಳಿಸಿದರು... ಬಂದವರಿಗೆ ಕುಳಿತುಕೊಳ್ಳಲು ಕುರ್ಚಿ ಬೆಂಚು ಯಾವ ಪೀಠೋಪಕರಣವೂ ಇರಲಿಲ್ಲ... ಸೊಂಟದೆತ್ತರದ ಸಣ್ಣ ಬೀರುವಿನಲ್ಲಿ ನನ್ನ ಲೈಬ್ರೆರಿ ಇತ್ತು. ಷೇಕ್ಸ್‌ಪೀಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಇಂಗ್ಲೀಷ್ ಕವಿಗಳ ಕಂಪ್ಲೀಟ್ ವರ್ಕ್ಸ್ , ಸ್ವಾಮಿ ವಿವೇಕಾನಂದರ ಭಾಷಣ ಲೇಖನ ಸಂಗ್ರಹ, ಸುರೇಂದ್ರನಾಥ ಬ್ಯಾನರ್ಜಿ, ಸರೋಜಿನಿ ನಾಯ್ಡು ಅಂತಹ ದೇಶಭಕ್ತರ ಭಾಷಣಗಳ ಸಂಗ್ರಹಗಳು, ಸ್ವಾಮಿ ರಾಮತೀರ್ಥ, ಭಾಯಿ ಪರಮಾನಂದ, ಬಾಬಾ ಭಾರತಿ ಅಂತಹವರ ಕೃತಿಗಳು, ಶ್ರೀರಾಮಕೃಷ್ಣರ ಬೃಹತ್ ಜೀವನಚರಿತ್ರೆ, ವರ್ಲ್ಡ್ ಕ್ಲಾಸಿಕ್ಸ್‌ಗಳ ಪುಸ್ತಕ ಶ್ರೇಣಿ, ಟಾಲ್‌ಸ್ಟಾಯ್ ಕೃತಿಗಳು ಮತ್ತು ಜೀವನಚರಿತ್ರೆ, ಇತ್ಯಾದಿ ಇತ್ಯಾದಿ ಪ್ರಾಚ್ಯ ಪಾಶ್ಚಾತ್ಯ ಸಾಹಿತ್ಯಕ ಮತ್ತು ದಾರ್ಶನಿಕ ಗ್ರಂಥಗಳ ಪುಟ್ಟ ಸಂಗ್ರಹವಿತ್ತು. ಸ್ವಾಮೀಜಿ ವೀಕ್ಷಿಸಿದರು, ಗೋಡೆಗಳ ಮೇಲೆ ಆಗಿನ ಸುಪ್ರಸಿದ್ಧ ದೇಶಭಕ್ತರೆಲ್ಲರೂ ಹಂತಿಗೊಂಡಿದ್ದರು... ಮತ್ತೆ ವೀಕ್ಷಿಸಿದರು, ಸುತ್ತಲೂ ಆ ಸಂತೆಪೇಟೆಯ ಬರಿಯ ದಿನಸಿ, ಗಾಡಿ, ಧೂಳಿ, ಘಾಟು, ಮೆಣಸಿನ ಕಾಯಿ, ಕೊತ್ತಂಬರಿ, ಹುರುಳಿ ಇತ್ಯಾದಿ ಮೂಟೆ ಮೂಟೆ ಮೂಟೆಗಳ ಗೊಂದಲ, ಗಲಾಟೆ, ಕಾವ್ಯಕ್ಕಾಗಲಿ ಕಲೆಗಾಗಲಿ ತತ್ತ್ವಕ್ಕಾಗಲಿ ಅಲ್ಲಿ ತಲೆಹಾಕಲೂ ಪ್ರವೇಶವಿಲ್ಲ... ‘‘ಪುಟ್ಟಪ್ಪ, ಕವಿಯಾಗಿರುವ ನಿಮ್ಮಂಥವರು ಈ ಅಸಹ್ಯ ಸ್ಥಳದಲ್ಲಿ ವಾಸಮಾಡುವುದಾದರೂ ಹೇಗೆ?’’ ಹೊರಹೊಮ್ಮಿತು ಸ್ವಾಮೀಜಿಯ ದುಃಖಧ್ವನಿ. ಸ್ವಾಮೀಜಿಯವರಿಗೆ ಕಾಣಿಸುತ್ತಿದ್ದ ದುಃಖಕಾರಣವಾದ ದಾರುಣ ಪರಿಸ್ಥಿತಿ ನನಗೇನೂ ಕಾಣಿಸುತ್ತಿರಲಿಲ್ಲ. ಆ ಸ್ಥಳದ ಮತ್ತು ಸನ್ನಿವೇಶದ ಸಮರ್ಥನೆಯ ಪರವಾಗಿ ಎಂಬಂತೆ, ಹೋಟೇಲಿನ ಒಳ ಅಂಗಳದಲ್ಲಿದ್ದ ಒಂದು ದೊಡ್ಡ ಸಂಪಿಗೆ ಮರದತ್ತ ಅವರ ಗಮನ ಸೆಳೆದು ಕೇಳಿದೆ: ‘‘ಯಾಕೆ, ಸ್ವಾಮೀಜಿ ಏನಾಗಿದೆ ಈ ಜಾಗ? ನೋಡಿ ಅಲ್ಲಿ, ಎಂತಹ ಸೊಗಸಾದ ಸಂಪಿಗೆ ಮರ ಇದೆ!’’ ನಾನಂದುದಕ್ಕೆ ಸ್ವಾಮೀಜಿ ತಡೆಯಲಾರದೆ ನಕ್ಕುಬಿಟ್ಟರು, ನನ್ನ ಕಡೆಯೆ ನೋಡುತ್ತಾ, ಕನಿಕರಿಸಿ. ಆದರೂ ಸ್ವಾಮೀಜಿ, ‘ಆ ಕಚಡಾ ಜಾಗದಲ್ಲಿರುವುದರಿಂದ ಆರೋಗ್ಯ ಕೆಡುತ್ತದೆ’ ಎಂದು ನಾನಾ ರೀತಿಯಿಂದ ಬುದ್ಧಿ ಹೇಳಿ ಚಿಂತಿಸುತ್ತಾ ಬೀಳ್ಕೊಂಡರು...

‘‘..ಶ್ರೀಗುರುದೇವನ ಕರುಣಾಹಸ್ತ ಒಯ್ಯೊಯ್ಯನೆ ನನ್ನ ಕಡೆಗೆ ಬಳಿ ಸಾರುತ್ತಿತ್ತು, ಎತ್ತಿ ಕೊಂಡೊಯ್ಯಲು!... ಕ್ರಮೇಣ ಬರುಬರುತ್ತಾ ಶ್ರೀರಾಮಕೃಷ್ಣಾಶ್ರಮವು ನನ್ನ ಒಳಬಾಳಿನ ಕೇಂದ್ರವಾಗತೊಡಗಿತ್ತು. ಹೊರನೋಟಕ್ಕೆ ಅತ್ಯಂತ ಸಾಧಾರಣರೂ ಯಃಕಶ್ಚಿತರೂ ಆಗಿ ತೋರುತ್ತಿದ್ದ ಸ್ವಾಮಿ ಸಿದ್ಧೇಶ್ವರಾನಂದರು ಆ ಕೇಂದ್ರದ ಅಧಿದೇವತಾ ಕಾಂತಶಕ್ತಿಯಾಗಿ ನನ್ನ ಅಹಂಕಾರ ಸ್ವಪ್ರತಿಷ್ಠೆಗಳನ್ನೆಲ್ಲ ತಮ್ಮ ಅಹಂಕಾರಶೂನ್ಯತೆಗೆ, ನನ್ನ ಆತ್ಮಗೌರವಕ್ಕೆ ಅಪಚಾರವಾಗದಂತೆ, ಸೇದಿಕೊಳ್ಳತೊಡಗಿದರು.’’

ಮುಂದೆ ಕ್ರಾನಿಕ್ ಮಲೇರಿಯಾದಿಂದ ಪೀಡಿತರಾದ ಪುಟ್ಟಪ್ಪನನ್ನು ಸ್ವಾಮೀಜಿ ಕೃಷ್ಣರಾಜ ಆಸ್ಪತ್ರೆಗೆ ಸೇರಿಸಿ ೧೫ ದಿನ ಚಿಕಿತ್ಸೆ ಕೊಡಿಸಿದರು. ಜ್ವರ ಬಿಟ್ಟುಹೋದ ಬಳಿಕ ಆವಶ್ಯಕವಾದ ಔಷಧೋಪಚಾರ, ಪಥ್ಯ, ಮತ್ತು ಶುಶ್ರೂಷೆಗಾಗಿ ಸ್ವಾಮೀಜಿ, ಸಂತೆಪೇಟೆಯ ಹಳೆಯ ಕೋಣೆಗೆ ಮರಳಬೇಕೆಂದಿದ್ದ ಪುಟ್ಟಪ್ಪನನ್ನು ಬಹಳ ಒತ್ತಾಯದಿಂದ ರಾಮಕೃಷ್ಣ ಆಶ್ರಮಕ್ಕೆ ಕರೆದೊಯ್ದರು. ಕುವೆಂಪು ಬರೆಯುತ್ತಾರೆ: ‘‘...ನೆನೆದರೆ ಈಗಲೂ ನನ್ನ ಕಣ್ಣು ಒದ್ದೆಯಾಗುತ್ತದೆ. ಒಮ್ಮೊಮ್ಮೆ ಸೇವೆಗೆ ಯಾರೂ ಒದಗದಿದ್ದಾಗ ಸ್ವಯಂ ಸ್ವಾಮೀಜಿಯೆ ನನ್ನ ಬಟ್ಟೆಗಳನ್ನು ಒಗೆದು ಒಣಗಿಸಿ ಕೊಡುತ್ತಿದ್ದರು... ಆಶ್ರಮದ ಪ್ರಶಾಂತ ಪವಿತ್ರ ಸ್ನೇಹಮಯ ವಾತಾವರಣದಲ್ಲಿ ಸ್ವಾಮೀಜಿಯ ಅಕ್ಕರೆಯ ಶುಶ್ರೂಷೆಯಿಂದ ನಾನು ಚೇತರಿಸಿಕೊಂಡ ಮೇಲೆ, ನಾನು ಊರಿಗೆ ಹೋಗಿ ಬರುವಂತೆ ಸ್ವಾಮೀಜಿಯೆ ಹೇಳಿದರು...’’

ಶ್ರೀರಾಮಕೃಷ್ಣ ಮಹಾಸಂಘದ ಆಗಿನ ಅಧ್ಯಕ್ಷ ಸ್ವಾಮಿ ಶಿವಾನಂದ (ಮಹಾಪುರುಷಜಿ) ಅವರಿಂದ ದೀಕ್ಷಾನುಗ್ರಹಕ್ಕೆ ಪಾತ್ರನಾಗಬೇಕೆಂದು ಸಿದ್ಧೇಶ್ವರಾನಂದರು ಸಲಹೆ ನೀಡಿದಾಗ ಕುವೆಂಪು ಹಿಗ್ಗಿನಿಂದಲೆ ಸಮ್ಮತಿಸಿದರು. ಇದರ ಕುರಿತಾಗಿ ಕುವೆಂಪು ಬರೆಯುತ್ತಾರೆ: ‘‘ನಾನು ಒಪ್ಪಿದುದಕ್ಕೆ ಮುಖ್ಯ ಕಾರಣ ಅಥವಾ ಪ್ರೇರಣೆ

**ಎಷ್ಟರ ಮಟ್ಟಿಗೆ ಆಧ್ಯಾತ್ಮಿಕವಾಗಿತ್ತೊ ನಾನು ಹೇಳಲಾರೆ. ನಾನು ಒಪ್ಪಿದುದು, ಮುಖ್ಯವಾಗಿ, ಈ ಸಲಹೆ ಗೋಪಾಲ ಮಹಾರಾಜ (ಸ್ವಾಮಿ ಸಿದ್ಧೇಶ್ವರಾನಂದ)ರಿಂದ ಬಂದುದರಿಂದಲೆ!... ಮಹಾ ಪುರುಷ ಸ್ವಾಮಿ ಶಿವಾನಂದರಿಂದ, ನನ್ನ ಜೀವನ ಸಮಸ್ತವನ್ನೂ ಅಲ್ಪತ್ವದಿಂದ ಮೇಲಕ್ಕೆತ್ತಿ, ನನ್ನಾತ್ಮವನ್ನು ಭೂಮತ್ವದಲ್ಲಿ ಸಂಸ್ಥಾಪಿಸುವ ಸಂಸ್ಕಾರವೊಂದಕ್ಕೆ ನನ್ನನ್ನು ಪಾತ್ರನಾಗುವಂತೆ ಮಾಡುತ್ತೇನೆ ಎಂದು ಅವರು ತಮ್ಮ ಅಹೈತುಕೀ ಪ್ರೀತಿಯಿಂದ ಆಶ್ವಾಸನವಿತ್ತರೆ, ಅದಕ್ಕೆ ಎಂದಾದರೂ ಒಲ್ಲೆ ಎನ್ನುವುದು ಸಾಧ್ಯವೆ?''**

೮-೧೦-೧೯೨೨ರಂದು ಕಲ್ಕತ್ತಾದ ಬೇಲೂರುಮಠದಲ್ಲಿ ಸ್ವಾಮಿ ಸಿದ್ಧೇಶ್ವರಾನಂದರು ಪುಟ್ಟಪ್ಪನಿಗೆ ಹೇಳಿದರು: ''**ಈವೊತ್ತು ನಿಜವಾಗಿಯೂ ಪ್ರಶಸ್ತವಾದ ದಿನ; ಸರಸ್ವತೀ ಆವಾಹನೆಯ ಶುಭದಿನ. ಕವಿಯಾಗಿರುವ ನಿನಗೆ ಈ ದಿನ ದೀಕ್ಷೆ ದೊರೆಯುತ್ತಿರುವುದರಲ್ಲಿ ತುಂಬ ಅರ್ಥವಿದೆ, ಧ್ವನಿಯಿದೆ!**'' ಇದರ ಕುರಿತು ಮುಂದೆ ಕುವೆಂಪು ಬರೆಯುತ್ತಾರೆ: ''**ಈ ವಾಕ್ಕು ಎಂತಹ ಪ್ರವಾದಶಕ್ತಿಯಿಂದ ಕೂಡಿ ಎಷ್ಟು ಸತ್ವಗರ್ಭಿತವಾಗಿತ್ತು ಎಂಬುದು ಸುಸ್ಪಷ್ಟವಾಗಿದೆ. ಅಂದು ನನಗೊದಗಿದ ಆಶೀರ್ವಾದದ ತಪೋಬಲವೆ ನನ್ನನ್ನು ಬದುಕಿನ ಕುಟಿಲ ಜಟಿಲವಾದ ಹಾದಿಯುದ್ದಕ್ಕೂ ಕೈಹಿಡಿದು ನಡೆಸಿ, ನನ್ನಿಂದ ಸಾಹಿತ್ಯಕ ಮಹಾಕೃತಿಗಳನ್ನು ಸೃಷ್ಟಿಸಿ, ನನ್ನ ಜೀವನವನ್ನು ಧನ್ಯವನ್ನಾಗಿ ಮಾಡಿದೆ!**''

ಹೀಗೆ ಸ್ವಾಮಿ ಸಿದ್ಧೇಶ್ವರಾನಂದರ ನಿರ್ಮಲವಾದ ಪ್ರೀತಿ ಮತ್ತು ಆಧ್ಯಾತ್ಮಿಕ ನಿರ್ದೇಶನಗಳಿಂದ, ರಾಮಕೃಷ್ಣ ಮಹಾಸಂಘದ ಅಧ್ಯಕ್ಷ ಮಹಾಪುರುಷ ಸ್ವಾಮಿ ಶಿವಾನಂದರ ಮಂತ್ರದೀಕ್ಷೆಯ ಪ್ರಸಾದದಿಂದ, ಮತ್ತು ಶ್ರೀರಾಮಕೃಷ್ಣ-ವಿವೇಕಾನಂದ ಸಾಹಿತ್ಯದಿಂದ ಪ್ರದೀಪ್ತವಾದ ಕುವೆಂಪು ಚೇತನ ಮತ್ತು ಕವಿಹೃದಯಗಳು ತಮ್ಮ ಮಹಾಕಾವ್ಯ, ಮಹಾಕಾದಂಬರಿಗಳು, ಮತ್ತು ಆಧ್ಯಾತ್ಮಿಕ ಕವನಗಳ ಮೂಲಕ ಕರ್ನಾಟಕದಲ್ಲಿ ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಮಹತ್ತರ ಕೊಡುಗೆಗಳನ್ನು ನೀಡಿವೆ. ಈ ಲೇಖನದಲ್ಲಿ ಶ್ರೀರಾಮಕೃಷ್ಣ-ವಿವೇಕಾನಂದರ ಕೆಲವು ಭಾವಧಾರೆಗಳ ಸ್ಥೂಲ ಪರಿಚಯ ಮಾಡಿಸುತ್ತಾ ಅವುಗಳಿಗೆ ಕುವೆಂಪು ಯಾವ ರೀತಿಗಳಲ್ಲಿ ಕೊಡುಗೆಗಳನ್ನು ನೀಡಿದ್ದಾರೆ ಎಂಬುದರ ಪಕ್ಷಿನೋಟ ಇಲ್ಲಿದೆ.

## ೧. ಎಲ್ಲ ಧರ್ಮಗಳ ಏಕತೆ

ಸ್ವಾಮಿ ವಿವೇಕಾನಂದರು ಎಲ್ಲ ಧರ್ಮಗಳ ನಿಜವಾದ ಏಕತೆಯಲ್ಲಿ ಭರವಸೆಯಿಟ್ಟಿದ್ದರು. ಅವರು ಬೋಧಿಸಿದಂತೆ, ವಿವಿಧ ಧರ್ಮಗಳು ವಿಭಿನ್ನ ಮಾರ್ಗಗಳು ಆದರೆ ಎಲ್ಲವು ಒಂದೇ ಗುರಿಯತ್ತ, ಅಂದರೆ ದೈವ ಸಾಕ್ಷಾತ್ಕಾರದತ್ತ ದಾರಿ ಮಾಡಿಕೊಡುತ್ತವೆ. ಅವರ ಗುರುಗಳಾದ ಶ್ರೀರಾಮಕೃಷ್ಣರ ಪ್ರಸಿದ್ಧ ವಾಕ್ಯ, ''**ಎಷ್ಟು ನಂಬಿಕೆಗಳೊ, ಅಷ್ಟು ಮಾರ್ಗಗಳು**'', ಇದನ್ನೇ ಹೇಳುತ್ತದೆ. ಅವರು ಎಲ್ಲಾ ಧರ್ಮಗಳನ್ನು ಮಾನ್ಯವಾದ ಮತ್ತು ಪರಸ್ಪರ ಪೂರಕವೆಂದು ಪರಿಗಣಿಸಿದ್ದರು ಮತ್ತು ಧರ್ಮಗಳ ನಡುವೆ ಪರಸ್ಪರ ಗೌರವ ಮತ್ತು ಸಹಿಷ್ಣುತೆಯನ್ನು ಉತ್ತೇಜಿಸಿದ್ದರು.

ಕುವೆಂಪು ತಮ್ಮ ೩೦ರ ಹರಯದಲ್ಲಿಯೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮತ ಮನಜಮತವಾಗಬೇಕು, ನಡೆಯುವ ದಾರಿಯು ವಿಶ್ವಪಥವಾಗಬೇಕು ಎಂದು ಈ ರೀತಿಯ ಕರೆಕೊಟ್ಟಿದ್ದರು: ''**ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ! ಮತಿಯಿಂದ ದುಡಿಯಿರೈ ಲೋಕಹಿತಕೆ ! ಆ ಮತದ ಈ ಮತದ ಹಳೆಮತದ ಸಹವಾಸ! ಸಾಕಿನ್ನು ಸೇರಿರೈ ಮನುಜಮತಕೆ ! ಓ ಬನ್ನಿ ಸೋದರರೆ, ವಿಶ್ವಪಥಕೆ !** ''

ಅದಲ್ಲದೆ, ಧರ್ಮಗಳ ಕುರಿತಾಗಿ ಕುವೆಂಪು ತಮ್ಮ ಪಂಚಮಂತ್ರ ಮತ್ತು ಸಪ್ತಸೂತ್ರಗಳಲ್ಲಿ ಹೀಗೆ ಬರೆಯುತ್ತಾರೆ: **೧. ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು. ೨. ಮತ ಮನುಜಮತ ಆಗಬೇಕು. ಪಥ ವಿಶ್ವಪಥ ಆಗಬೇಕು. ಮನುಷ್ಯ ವಿಶ್ವಮಾನವ ಆಗಬೇಕು. ೩.ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬನ ಮತಕ್ಕೆ ಸೇರಿ ಗುಂಪುಗಟ್ಟಿ ಜಗಳ ಹಚ್ಚುವಂತಾಗಬಾರದು. ೪. ಯಾವ ಒಂದು ಗ್ರಂಥವೂ ಏಕೈಕ 'ಪರಮಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬನೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ, ತಿಳಿದು ತನ್ನ 'ದರ್ಶನ'ವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಇದೇ ಅಭಿಪ್ರಾಯದ ಮಾತುಗಳನ್ನು ಹೇಳಿದ್ದರು.**

## ೨. ಅದ್ವೈತ ವೇದಾಂತ (ಏಕತ್ವದ ತತ್ತ್ವ)

ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ತತ್ತ್ವದ ಕೇಂದ್ರಬಿಂದುವಾಗಿರುವುದು **ಅದ್ವೈತ ವೇದಾಂತ**. ಮೂಲದಲ್ಲಿ ಪರಮ ಸತ್ಯವು ಅದ್ವೈತ(ಏಕತ್ವ)ವಾಗಿದ್ದು, ಎಲ್ಲಾಜೀವಗಳಲ್ಲಿ ಬ್ರಹ್ಮವು (ದೈವ) ಅಸ್ತಿತ್ವ ಹೊಂದಿದೆ ಎಂಬುದನ್ನು ಇದು ಸಾರುತ್ತದೆ. ಈ ತತ್ತ್ವದ ಪ್ರಕಾರ, ಒಂದು ವ್ಯಕ್ತಿಯ ಆತ್ಮ ಮತ್ತು ವಿಶ್ವವ್ಯಾಪಕ ಬ್ರಹ್ಮ (ವಿಶ್ವಾತ್ಮ) ಇವುಗಳ ನಡುವೆ ತಾತ್ತ್ವಿಕ ವಿಭಜನೆಯೇ ಇಲ್ಲ. ಮಾನವನ ಜೀವನದ ಗುರಿಯು, ತನ್ನ ಒಳಗಿನ ದೈವತ್ವವನ್ನು ಮತ್ತು ಇತರರಲ್ಲಿರುವ ಅದೇ ದೈವತ್ವವನ್ನು ಅರಿತು, ಅದ್ವೈತ ತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಾಗಿದೆ.

'**ಶ್ರೀರಾಮಾಯಣ ದರ್ಶನಂ**' ಕಾವ್ಯದ ರಾಮ-ರಾವಣ ಯುದ್ಧದ ಸಂದರ್ಭದಲ್ಲಿ ರಾಮ ಹನುಮಂತನಿಗೆ ಹೇಳುತ್ತಾನೆ: ''**ನಾನೆ ಆ ರಾವಣನ ಮೂಲಬಲ ಶಕ್ತಿ! ನನ್ನ ಅಸತ್ಶಕ್ತಿಯಂ ಗೆಲಲರಿದು ನನಗಲ್ಲದಿತರರಿಗೆ... ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್ ಸೀತೆಯನೊಲಿವುದುಂ ಮೇಣವಳನೊಯ್ವುದುಂ ಪೇಳ್, ಮೊರ್ಗ್ಗ?**''

ಇಲ್ಲಿ ರಾಮ-ರಾವಣ ಇಬ್ಬರೂ ವಿರಾಟ್ ಅದ್ವೈತ ತತ್ತ್ವದ ಎರಡು ಮುಖಗಳು: ಒಂದು ಚಿತ್, ಇನ್ನೊಂದು ಅಚಿತ್. ಶ್ರೀಸಂಪುಟದಲ್ಲಿ ಅದ್ವೈತ ವೇದಾಂತದ ಪಂಚಕೋಶ ವಿವೇಕದ ಪ್ರಸ್ತಾಪ ಕೂಡಾ ಬರುತ್ತದೆ: ''**ಮನೋಮಯಂ ಪ್ರಾಣಮಯ**

**ಮನ್ನಮಯದಾ ಪ್ರತಿಮೆಗಳ್ ಮಾನವತೆ ವಾನರತೆ ದೈತ್ಯತೆಗಳಂ ದಾಂಟುವೋಲ್..''**

### ೩. ಶಕ್ತಿ ಮತ್ತು ನಿರ್ಭೀತಿ

ವಿವೇಕಾನಂದರು ಆಂತರಿಕ ಶಕ್ತಿ ಮತ್ತು ನಿರ್ಭೀತಿಯನ್ನು ಆಧ್ಯಾತ್ಮಿಕ ಬೆಳವಣಿಗೆಯ ಅನಿವಾರ್ಯ ಗುಣಗಳೆಂದು ಪರಿಗಣಿಸಿದ್ದರು. ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಅವರು ಒತ್ತಿಹೇಳಿದ್ದರು, ಏಕೆಂದರೆ ದುರ್ಬಲತೆ ಮತ್ತು ಭಯ ಆಧ್ಯಾತ್ಮಿಕ ಅರಿವಿಗೆ ಅಡ್ಡಿಯಾಗುತ್ತವೆ. **''ಏಳಿರಿ, ಎಚ್ಚರಗೊಳ್ಳಿರಿ, ಗುರಿ ಮುಟ್ಟುವ ತನಕ ನಿಲ್ಲಬೇಡಿ''** ಎಂಬ ಅವರ ಕರೆಯನ್ನು ಈ ದೃಷ್ಟಿಕೋನದ ಪ್ರತಿಬಿಂಬವಾಗಿ ಕಾಣಬಹುದು. ಕುವೆಂಪು ಅವರ **'ಅಗ್ನಿಹಂಸ'**ದಲ್ಲಿ ಭೀತಿ ಅಥವಾ ಭಯ ಯಾಕೆ? ಎಂಬುದರ ಕುರಿತಾದ ಒಂದು ಕವನ ಹೀಗಿದೆ:

**ರವಿಗಿಲ್ಲದ ಭಯ, ಶಶಿಗಿಲ್ಲದ ಭಯ**
**ತಾರಾನಿವಹಕೆ ಇರದ ಭಯ**
**ನಿನಗೇತಕೆ ಬಿಡು, ಅಣು! ಶ್ರದ್ಧೆಯನಿಡು**
**ನಿನ್ನನೆ ನೈವೇದ್ಯವ ನೀಡು!**

ಸೂರ್ಯ ಚಂದ್ರರಿಗೆ ನಕ್ಷತ್ರಪುಂಜಗಳಿಗೆ ಇಲ್ಲದ ಭಯ ಅಣು ಪ್ರಮಾಣದ ನಿನಗೆ ಯಾಕೆ? ನಿರ್ಭೀತಿಯಿಂದಿರಿ, ದೇವರಲ್ಲಿ ಶ್ರದ್ಧೆಯಿಡಿ ಎನ್ನುವುದು ಇದರ ಸಂದೇಶ! ಅನಾರೋಗ್ಯವಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಕುವೆಂಪು ಬರೆದ ಕವನ ಅವರ ನಿರ್ಭೀತಿಶೀಲತೆಗೆ ಸಾಕ್ಷಿ:

**ಸಿದ್ಧವಾಗಿಹೆ ನಾನು ಕಾಳಿ!**
**ಎದೆಯೊಡ್ಡಿ ನಿಂತಿಹೆನು**
**ಆದುದಾಗಲಿ ದೇವಿ**
**ನಿರ್ಭೀತ ನಾನು!**

### ೪. ಆತ್ಮಸಾಕ್ಷಾತ್ಕಾರ (ಸ್ವಯಂಪ್ರಜ್ಞೆ) ವ್ಯಕ್ತಿಗತ ಸಾಮರ್ಥ್ಯ, ಮತ್ತು ಅಹಂಕಾರನಿರಸನ

ವಿವೇಕಾನಂದರ ಬೋಧನೆಗಳಲ್ಲಿ, ಪ್ರತಿಯೊಬ್ಬ ವ್ಯಕ್ತಿಗೂ ಅನಂತ ಶಕ್ತಿಯಿದೆ ಎಂಬ ನಂಬಿಕೆ ಕೇಂದ್ರಬಿಂದುವಾಗಿತ್ತು. ಅನಾಸಕ್ತಿ, ಧ್ಯಾನ, ಅಹಂಕಾರನಿರಸನ, ಮತ್ತು ನಿಸ್ವಾರ್ಥ ಸೇವೆಯ ಮೂಲಕ ವ್ಯಕ್ತಿಗಳು ತಮ್ಮ ನಿಜವಾದ ಸ್ವರೂಪವನ್ನು ಅರಿತುಕೊಂಡು, ಆತ್ಮಸಾಕ್ಷಾತ್ಕಾರ (ಮೋಕ್ಷ) ಪಡೆಯಬಹುದು. ಅವರು ವ್ಯಕ್ತಿಗಳನ್ನು ಹೆಚ್ಚು ಏಕಾಗ್ರತೆ, ಧೈರ್ಯ ಮತ್ತು ಹೃದಯದ ಪವಿತ್ರತೆಯನ್ನು ಅಭಿವೃದ್ಧಿಪಡಿಸಲು ಪ್ರೇರೇಪಿಸಿದರು. ಆತ್ಮಸಾಕ್ಷಾತ್ಕಾರಕ್ಕೆ ಅತ್ಯಗತ್ಯವಾದ 'ಅಹಂಕಾರ'ವನ್ನು ಮೆಟ್ಟಿ ನಿಲ್ಲುವುದರ ಕುರಿತಾದ ಕುವೆಂಪುರವರ ಒಂದು ಕವನ ಹೀಗಿದೆ:

**ತುಳಿ ತುಳಿ ಹತ್ತಿ ತುಳಿ ಮತ್ತೆ ತುಳಿ, ಒತ್ತಿ ತುಳಿ**
**ಅಹಂಕಾರವಳಿಯಲಿ**
**ನಾನು ಎಂಬುದೆಲ್ಲ ಉದುರಿ**
**ನೀನು ಮಾತ್ರ ಉಳಿಯಲಿ.** *(ಶ್ರೀಗುರು ಚರಣಕೆ)*

'ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಅಹಂಕಾರ ನಿರಸನದ ಕುರಿತು ಭರತನ ಪತ್ನಿ ಮಾಂಡವಿಗೆ ಲಕ್ಷ್ಮಣನ ಪತ್ನಿ ಊರ್ಮಿಳೆ ಹೇಳುತ್ತಾಳೆ–

**....ತನ್ನ ತಾನ್**
**ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ**
**ಮೇಣ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ**

### ೫. ಧ್ಯಾನ ಮತ್ತು ಇಂದ್ರಿಯನಿಯಂತ್ರಣ

ಧ್ಯಾನ ಮತ್ತು ಸ್ವ–ಶಿಸ್ತು (ಇಂದ್ರಿಯ ನಿಯಂತ್ರಣ) ಆಧ್ಯಾತ್ಮಿಕ ಬೆಳವಣಿಗೆಗೆ ಬೇಕಾದ ಮುಖ್ಯ ಅಭ್ಯಾಸಗಳು. ಧ್ಯಾನದ ಮೂಲಕ, ಒಬ್ಬನು ಮನಸ್ಸನ್ನು ಶಾಂತಗೊಳಿಸಿ, ಒಳಗಿನ ಶಾಂತಿಯನ್ನು ಅನುಭವಿಸಿ, ದೈವಿಕತೆಯೊಂದಿಗಿನ ನಂಟನ್ನು ಪ್ರಾಪಂಚಿಕ ಅಸ್ತಿತ್ವದೊಂದಿಗೆ ಅನುಭವಿಸಬಹುದು. ವಿವೇಕಾನಂದರು ನಿಯಮಿತ ಧ್ಯಾನ, ಸ್ವ–ಶಿಸ್ತು, ಹಾಗೂ ಶುಚಿತ್ವವನ್ನು ಅಳವಡಿಸಲು ಒತ್ತಾಯಿಸಿದರು.

ಧ್ಯಾನದ ಮಹತ್ವದ ಕುರಿತಾದ ಒಂದು ಪ್ರಸಂಗ **'ಶ್ರೀರಾಮಾಯಣ ದರ್ಶನಂ'** ನಲ್ಲಿ ಬರುತ್ತದೆ: ಅಶೋಕವನದಲ್ಲಿದ್ದ ಸೀತೆಯನ್ನು ನೋಡಲು ರಾವಣ ಬಂದಿದ್ದಾಗ ಅಲ್ಲಿ ಸೀತೆಯ ಬದಲು ರಣಚಂಡಿಯು ಭಯಂಕರವಾಗಿ ನರ್ತಿಸುವುದನ್ನು ಕಂಡು ಭಯಭೀತನಾಗಿ ಹೊರಟುಹೋಗುತ್ತಾನೆ. ರಾವಣನಿನ್ನು ನನ್ನನ್ನು ನೋಡಲು ಬರುವುದಿಲ್ಲವೆಂದು ಸೀತೆ ಹೇಳಿದಾಗ, **'ನೀನು ಯಾರಮ್ಮಾ?'** ಎಂದು ತ್ರಿಜಟೆ ಕೇಳುತ್ತಾಳೆ. ಆಗ ಸೀತೆ ಹೇಳುತ್ತಾಳೆ:

**'ಆವುದಾಗಲಿ ನೆಪಂ ಫಲದಾಯಕಂ ತಪಂ ನಾನಿಂದು ಅಂದಿನವಳಲ್ಲ. ರಾಮಧ್ಯಾನ ಮಹಿಮೆಯ ನಿರಂತರ ತಪಸ್ಯೆಯಿಂ ನನಗಲೌಕಿಕ ಸಿದ್ಧಿ ತನಗೆ ತಾನಾಯ್ತು. ರಾಮನನರಿತೆನಾತ್ಮದಿಂ...'**

ಇಲ್ಲಿ ಧ್ಯಾನ ಮತ್ತು ಇಂದ್ರಿಯನಿಗ್ರಹಗಳ ಪರಿಣಾಮವಾಗಿ ಆತ್ಮವಿಕಾಸವಾಗುವುದನ್ನು ಸೂಚಿಸುತ್ತದೆ. ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ದೃಷ್ಟಿಕೋನವು ಅದ್ವೈತ ತತ್ತ್ವ, ಭಕ್ತಿ, ಮಾನವ ಸೇವೆ, ಮತ್ತು ಪ್ರಾಯೋಗಿಕ ಕ್ರಿಯೆಗಳ ಸುಸಮ್ಮಿಲನವಾಗಿದೆ. ಅವರ ಬೋಧನೆಗಳು ಈಗಲೂ ವಿಶ್ವದಾದ್ಯಂತ ಜನರಿಗೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಿವರ್ತನೆಗಾಗಿ ಪ್ರೇರಣೆಯಾಗುತ್ತಿವೆ.

### ೬. ಗುರುವಿನ ಪಾತ್ರ

ಶಿಷ್ಯನನ್ನು ಆಧ್ಯಾತ್ಮಿಕ ಜಾಗೃತಿಯ ಕಡೆಗೆ ಮುನ್ನಡೆಸಲು ಆಧ್ಯಾತ್ಮಿಕ ಗುರುವಿನ ಮಹತ್ವವನ್ನು ಶ್ರೀ ರಾಮಕೃಷ್ಣರು ಒತ್ತಿಹೇಳುತ್ತಿದ್ದರು. ಅವರೇ ಸ್ವಾಮಿ ವಿವೇಕಾನಂದರು ಸೇರಿದಂತೆ ಅನೇಕರಿಗೆ ಗುರುವಾಗಿದ್ದು, ನೇರ ಆಧ್ಯಾತ್ಮಿಕ ಜ್ಞಾನವನ್ನು ಅವರಿಗೆಲ್ಲ ನೀಡಿದರು. ಗುರುವು ಶಿಷ್ಯನ ಅಜ್ಞಾನವನ್ನು ಪರಿಹರಿಸಿ, ಶಿಷ್ಯನು ದೈವೀ ಶಕ್ತಿಯನ್ನು ಅರಿಯಲು ಸಹಾಯ ಮಾಡುತ್ತಾನೆ ಎಂದು ಅವರು ನಂಬಿದ್ದರು. ಕುವೆಂಪು ಅವರ ಒಂದು ಕವನ ಹೀಗಿದೆ.

**ಗುರುವೆಂಬವನೆನಗೋರ್ವನಿಲ್ಲ**
**ಗುರುವೇ ಎನಗೀ ಲೋಕವೆಲ್ಲ**

**ರಮ್ಯಾರುಣೋದಯವು ಗುರುವು;**
**ದಿವ್ಯ ಚಂದ್ರೋದಯವು ಗುರುವು!**

ಸಾಧಕನಿಗೆ ಗುರು ಬೇಕು, ಆದರೆ ಗುರು ವ್ಯಕ್ತಿಯಲ್ಲ, ಒಂದು ತತ್ತ್ವವೂ ಆಗಬಹುದು ಎಂಬ ಭಾವನೆ ಇಲ್ಲಿದೆ.

**'ದಾರಿ ತೋರೆನಗೆ'** ಕವಿತೆಯಲ್ಲಿ ಶ್ರೀರಾಮಕೃಷ್ಣರ ವಿಚಾರಗಳ ಪ್ರಭಾವವಿದೆ:

**ದಾರಿ ತೋರೆನಗೆ, ಗುರುವೆ**
**ದಾರಿ ತೋರೆನಗೆ. ಕವಲೊಡೆದ ಹಾದಿಗಳು;**
**ಕವಿದಿಹುದು ಕತ್ತಲೆಯು;**
**ಕಿವಿಗೊಟ್ಟು ಕೇಳಿದರೆ**
**ಕರೆವ ದನಿಯಿಲ್ಲ ;**
**ಕಣ್ಣಿಟ್ಟು ನೋಡಿದರೆ**
**ಹೊಳೆವ ಸೊಡರಿಲ್ಲ!**

ಮಲೆನಾಡಿಗೆ ಶ್ರೀಗುರುವನ್ನು ಆಹ್ವಾನಿಸುವ ಒಂದು ಕುವೆಂಪು ಕವನ ಹೀಗಿದೆ:

**ಬಾ ಶ್ರೀ ಗುರುದೇವನೆ ಬಾ**
**ಶ್ಯಾಮಲ ಕಾನನ ಶೃಂಗ ತರಂಗಿತ**
**ಸಹ್ಯಾದ್ರಿಯ ಸುಂದರ ಮಂದಿರಕೆ**
**ಚಿನ್ಮಯ ಮಮ ಹೃನ್ಮಂದಿರಕೆ**
**ಬಾ ಶ್ರೀ ಗುರುದೇವನೆ ಬಾ**

### ೭. ದೈವೀ ಮಾತೆ ಮತ್ತು ದೇವಿಯ ಶಕ್ತಿ ತತ್ತ್ವ

ರಾಮಕೃಷ್ಣರು ಕಾಳಿ ಎಂಬ ದೈವೀಮಾತೆಯೊಂದಿಗೆ ಆಳವಾದ ವೈಯಕ್ತಿಕ ಸಂಬಂಧ ಹೊಂದಿದ್ದರು. ಅವರ ಕಾಳಿಯ ಆರಾಧನೆಯು ದೇವರ ಸ್ತ್ರೀರೂಪದ ಶಕ್ತಿಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಅವರು ದೇವಿಯನ್ನು ಸೃಷ್ಟಿಕರ್ತೆ ಮತ್ತು ಪೋಷಕಿಯೆಂದು ಪರಿಗಣಿಸುತ್ತಿದ್ದರು. ದೇವರನ್ನು ಸಲಹುವ ಮತ್ತು ದಯಾಮಯಿಯಾದ ತಾಯಿಯ ಹತ್ತಿರ ಹೋಗುವಂತೆ ಬಳಿಸಾರಬಹುದೆಂದು, ಮತ್ತು ಪ್ರೀತಿಪುರಸ್ಸರವಾದ ಭಕ್ತಿಯ ಮೂಲಕ ಅಧ್ಯಾತ್ಮವನ್ನು ಅನುಭವಿಸಬಹುದೆಂಬುದು ಅವರ ನಂಬಿಕೆಯಾಗಿತ್ತು.

**'ಮಹಾಮಾತೆ'** ಕವಿತೆ ಮಹಾಮಾತೆಯನ್ನು ಹೀಗೆ ಸ್ತುತಿಸುತ್ತದೆ:

**ಶ್ರೀಶಾರದಾದೇವಿ ಹೇ ಮಹಾಮಾತೆ**
**ಶ್ರೀರಾಮಕೃಷ್ಣ ಗುರುದೇವ ಸಂಪ್ರೀತೆ**
**ಪರಮಪಾವನಹೃದಯೆ, ಕಲಿಯುಗದ ಸೀತೆ**
**ಭಕ್ತಯಿಂದಾರಾಧಿಪೆವು ನಿನ್ನನಮ್ಮಾ**

### ೮. ಭಕ್ತಿ ಮೂಲಕ ದೈವ ಸಾಕ್ಷಾತ್ಕಾರ (ಭಕ್ತಿಯೋಗ)

ಶ್ರೀ ರಾಮಕೃಷ್ಣರ ಬೋಧನೆಯ ಕೇಂದ್ರಬಿಂದುವಾದುದು **ಭಕ್ತಿ ಮೂಲಕ ದೈವ ಸಾಕ್ಷಾತ್ಕಾರ!** ಅವರ ನಂಬಿಕೆಯ ಪ್ರಕಾರ, ಮಾನವ ಜೀವನದ ಅತ್ಯಂತ ಮಹತ್ವದ ಗುರಿ ದೈವವನ್ನು ನೇರವಾಗಿ ಅನುಭವಿಸುವುದಾಗಿದೆ, ಅದು ಬುದ್ಧಿಯ ಬಲದಿಂದಲೋ ಅಥವಾ ತಿಳುವಳಿಕೆಯಿಂದಲೋ ಅಲ್ಲ, ಬದಲಿಗೆ ಶುದ್ಧ ಪ್ರೀತಿ ಮತ್ತು ದೇವರ ಪಾದಗಳಲ್ಲಿ ಶರಣಾಗತರಾಗುವುದರಿಂದ ಸಾಧ್ಯ. ಅವರು ದೇವರನ್ನು ಅತೀ ಪ್ರೀತಿಯ, ಪರಿಪೂರ್ಣ ಪ್ರತ್ಯುತ್ತರ ನೀಡುವ ವ್ಯಕ್ತಿಯೆಂದು ಕರೆದರು. ಈ ಕುವೆಂಪು ಕವನ ಇದೇ ಭಾವವನ್ನು ಒಳಗೊಂಡಿದೆ:

**ನಿನ್ನ ಆಶೀರ್ವಾದ ಪರಿವೇಷ ಮುತ್ತಿರಲಿ ನನ್ನನು ಸದಾ**
**ನನ್ನ ಭಕ್ತಿಯ ಬಳ್ಳಿ ಮಲರಾಂತು ಸುತ್ತಿರಲಿ ನಿನ್ನನು ಸದಾ**

ಹೀಗೆ ಸ್ವಾಮಿ ಸಿದ್ಧೇಶ್ವರಾನಂದರ ನಿರ್ಮಲವಾದ ಪ್ರೀತಿ ಮತ್ತು ಆಧ್ಯಾತ್ಮಿಕ ನಿರ್ದೇಶನಗಳಿಂದ, ರಾಮಕೃಷ್ಣ ಮಹಾಸಂಘದ ಅಂದಿನ ಅಧ್ಯಕ್ಷ ಮಹಾಪುರುಷ ಸ್ವಾಮಿ ಶಿವಾನಂದರ ಮಂತ್ರದೀಕ್ಷೆಯ ಪ್ರಸಾದದಿಂದ, ದಿವ್ಯತ್ರಯರ ಮೇಲಣ ಅಸೀಮ ಭಕ್ತಿಯಿಂದ, ಮತ್ತು ಶ್ರೀರಾಮಕೃಷ್ಣ-ವಿವೇಕಾನಂದ ಸಾಹಿತ್ಯದಿಂದ ಪ್ರದೀಪ್ತವಾದ ಕುವೆಂಪು ಚೇತನ ಮತ್ತು ಕವಿಹೃದಯಗಳು ತಮ್ಮ ಮಹಾಕಾವ್ಯ, ಮಹಾಕಾದಂಬರಿಗಳು, ಆಧ್ಯಾತ್ಮಿಕ ಕವನಗಳು, ಲೇಖನಗಳು ಮತ್ತು ಭಾಷಣಗಳ ಮೂಲಕ ಕರ್ನಾಟಕದಲ್ಲಿ ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಮಹತ್ತರ ಕೊಡುಗೆಗಳನ್ನು ನೀಡಿವೆ. ✽

## ಶ್ರೀಗುರುದೇವನಿಗೆರಗುವೆನು

ಶ್ರೀ ಗುರುದೇವನಿಗೆರಗುವೆನು :
ಗುರುಚರಣದಲಿ ನಾ ಕರಗುವೆನು!

ಸರ್ವಧರ್ಮಗಳ ವಾರಿಧಿಗೆ,
ಪುಣ್ಯದ ಸುರನದಿಗೆ,
ಬ್ರಹ್ಮಾನಂದ ಮಹೋದಧಿಗೆ,
ಶಾಂತಿಯ ಚಿರನಿಧಿಗೆ,
ಕತ್ತಲೆಯವನಿಗೆ
ಬೆಳಕಿತ್ತವನಿಗೆ
ಪರಮಹಂಸ ಗುರುದೇವನಿಗೆ !
ಶ್ರೀ ಗುರುದೇವನಿಗೆರಗುವೆನು.

ದಕ್ಷಿಣೇಶ್ವರದ ಗುಡಿಯಲ್ಲಿ
ತಿರುತಾಯಡಿಯಲ್ಲಿ
ವರ ವಟವೃಕ್ಷದ ಬುಡದಲ್ಲಿ
ಗಂಗೆಯ ದಡದಲ್ಲಿ
ಬಂಧವನೊಡೆದ
ಮುಕ್ತಿಯ ಪಡೆದ
ರಾಮಕೃಷ್ಣ ಗುರುದೇವನಿಗೆ !
ಶ್ರೀ ಗುರುದೇವನಿಗೆರಗುವೆನು.

— ಕುವೆಂಪು